(c) The estimated amount to be spent on these schemes on the areas so far identified is assessed at Rs. 11.37 lakhs and on an average the cost per acre works out to Rs. 1160.

(d) It is proposed to take up these schemes in a phased manner during 81.82 and beyond as and when the grants are allocated. However in Ghataprabha Project these works were taken up during 1975 itself, and are being continued dapending on the availability of funds in each years budget.

Beginning on this scheme has been made in respect of Kabini Project also during 80–81 and will be continued during current year.

## Representations from Members

### (i) Constitution of a River water Tribunal Cauvery waters

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಫೈನಾನ್ಸ್ ಮಿನಿಸ್ಟರ್‌ರವರು ಈ ಸದನದಲ್ಲಿ ಇದ್ದಾರೆ. ನಾನು ಮತ್ತು ಶ್ರೀಮಾನ್ ಬೊಮ್ಮಾಯಿಯವರು ಕೆಲವು ದಿವಸಗಳ ಹಿಂದೆ ಇಲ್ಲಿ ಅಂತರರಾಜ್ಯ ನದಿಗಳ ನೀರಿನ ವಿವಾದಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ, ಹಿಂದೂ ಪತ್ರಿಕೆಯಲ್ಲಿ ವರದಿಯಾದಂಥ ವಿಷಯದ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದನ್ನು ಮತ್ತೊಮ್ಮೆ ತಮ್ಮ ಮಂಖಾಂತರ ಅವರ ಗಮನಕ್ಕೆ ತಂದುಕೊಡುತ್ತೇನೆ. ಅವರು ಆ ದಿವಸ ಈ ಅಧಿವೇಶನ ಮುಗಿಯುವುದರೊಳಗೆ ಈ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ತಿಳಿಸುತ್ತೇನೆ. ಎನ್ನತಕ್ಕಂಥ ಆಶ್ವಾಸನೆಯನ್ನು ಕೊಟ್ಟಿರುತ್ತಾರೆ. ಮೊನ್ನೆ ಬ್ಯಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂದಾಗ, ರಾಜ್ಯಸರ್ಕಾರದ ಪರಿಣತರನ್ನು ಕರೆಸಿ, ಲಾ ಡಿಪಾರ್ಟ್‌ಮೆಂಟಿನ ಅಧಿಕಾರಿಗಳನ್ನು ಕರೆಸಿ ಅವರ ಜೊತೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿ ಈ ಸಭೆಯ ಮುಂದೆ ಒಂದು ಹೇಳಿಕೆಯನ್ನು ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರಿಗೆ ನಾವು ಹೇಳಿದ್ದೆವು. ಇಪತ್ತು ಈ ಅಧಿವೇಶನದ ಕೊನೆಯ ದಿವಸ. ನಾನು ಈ ಬಗ್ಗೆ ಪಕ್ಷ ರಾಜಕಾರಣವನ್ನು ಹೇಳುವುದಕ್ಕೆ ಪ್ರಯತ್ನ ಪಡುವುದಿಲ್ಲ. ಅಂತರ ರಾಜ್ಯ ನೀರಿನ ವಿವಾದಕ್ಕೆ ಒಳಗಾದಂಥ ಕರ್ನಾಟಕದ ಎರಡು ಪ್ರಮುಖ ನದಿಗಳು ಎಂದರೆ ಈ ಕೃಷ್ಣ ಮತ್ತು ಕಾವೇರಿ ನದಿಗಳು. ಈ ಕೃಷ್ಣಾ ನದಿಯ ವಿಚಾರದಲ್ಲಿ. ಈಗಾಗಲೇ ಇದರ ನೀರಿನ ಹಂಚಿಕೆಯ ವಿಚಾರ ಪಂಚಾಯತಿಗೆ ಹೋಗಿ ಒಂದು ಅಂತಿಮ ನಿರ್ಣಯವಾಗಿದೆ. ಆದರೆ ಈ ಕಾವೇರಿ ನದಿಯ ನೀರಿನ ಹಂಚಿಕೆಯ ವಿಚಾರದಲ್ಲಿ ಯಾವುದೇ ನಿರ್ಣಯವನ್ನು ನಾವು ಪಡೆಯುವುದಕ್ಕೆ ಆಗಲಿಲ್ಲ. ಇದು ಇನ್ನೂ ನೆನೆಗುದಿಗೆ ಬಿದ್ದಿರತಕ್ಕಂಥ ವಿಚಾರ ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ರಾಜ್ಯಸರ್ಕಾರದವರ ಹಕ್ಕನ್ನು ಮೊಟಕಿಗೊಳಿಸಿ ಈ ನದಿಗಳ ನೀರಿನ ಹಂಚಿಕೆ ಮತ್ತು ವಿತರಣೆಯ ಬಗ್ಗೆ ಸಂಪೂರ್ಣಾಧಿಕಾರವನ್ನು ಇಟ್ಟುಕೊಂಡು ತಮ್ಮದೇ ಆದ ನೀತಿಯನ್ನು ಹೇರುವುದಕ್ಕೆ ನೋಡುತ್ತಿದ್ದಾರೆ. ಅವರ ನೀತಿಗನುಗುಣವಾಗಿ ಈ ನದಿಯ ನೀರಿನ ಹಂಚಿಕೆಯನ್ನು ಮಾಡಿದ ಮೇಲೆ ಅದರ ಮೇಲ್ವಿಚಾರಣೆಯನ್ನು ನೋಡಿ ಕೊಳ್ಳುವುದಕ್ಕೆ ಒಂದು ರಿವರ್‌ವ್ಯಾಲಿ ಅಥಾರಿಟಿಯನ್ನು ನೇಮಕ ಮಾಡುವ ಬಗ್ಗೆ ಒಂದು ಡ್ರಾಫ್ಟ್ ಲೆಜಿಸ್ಲೇಷನ್ ಅನ್ನು ಮಾಡಿ ಸಚಿವಸಂಪುಟದ ಮುಂದೆ ಇಟ್ಟು ಒಪ್ಪಿಗೆಯನ್ನು ತೆಗೆದುಕೊಂಡು ಅದನ್ನು ಇಲ್ಲಿಗೆ ಕಳಿಸಿಕೊಡತಕ್ಕಂಥ ಸನ್ನಿವೇಶದಲ್ಲಿದ್ದಾರೆ. ಆದರೂ ಏನೊಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ಆಗಸ್ಟ್ ತಿಂಗಳಿನಲ್ಲಿ ಮಾಹಿತಿ ಬರತಕ್ಕಂಥ ಸಂದರ್ಭವಿದೆ. ಈಗಾಗಲೇ ಅಂತರರಾಜ್ಯ ಮಟ್ಟದಲ್ಲಿ ಆ ನಿರ್ಣಯದ ಬಗ್ಗೆ ಸತ್ಕಾಂಶ ಹೊರಬಂದಿದೆ. ಅವರ ಉದ್ದೇಶಿತ ಲೆಜಿಸ್ಲೇಷನ್ ಅನ್ನು ಜಾರಿಗೆ ತರುವುದರಿಂದ ನಮ್ಮ ಕಾವೇರಿ ನದಿಯ ಯೋ ನೆಗಳಿಗೆ ಬಹಳ ತೊಂದರೆಯಾಗಂತ್ತದೆ ಮತ್ತು ನಮಗೆ ಅದರಿಂದ ನ್ಯಾಯ ದೊರೆಯುವುದಿಲ್ಲ. ಆದ್ದರಿಂದ ನಾನು ಮಾನ್ಯ ಫೈನಾನ್ಸ್ ಮಿನಿಸ್ಟರ್‌ರವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ಅಷ್ಟು ಲಘುವಾಗಿ ತೆಗೆದುಕೊಳ್ಳತಕ್ಕಂಥ ವಿಷಯವಲ್ಲ.

ಈ ವಿಷಯವನ್ನು ಮಾನ್ಯ ಅರ್ಥಸಚಿವರು ಅಷ್ಟು ಲಘುವಾಗಿ ತಿಳಿದುಕೊಳ್ಳಬಾರದು. ನಾನು ಬೆಳಿಗ್ಗೆ ಒಬ್ಬ ಅಧಿಕಾರಿಯ ಬಗ್ಗೆ ಹೇಳಿದೆ ಅದನ್ನು ಬೇಕಾದರೆ ಲಘುವಾಗಿ ತಿಳದುಕೊಂಡರೆ ನಾನೇನು ಅಷ್ಟು ಕಾಳಜೀ ವಹಿಸುವುದಿಲ್ಲ. ಕಳೆದ ಸಾರಿ ಈ ಮನೆಯಲ್ಲಿ ಚರ್ಚೆ ಮಾಡುವಾಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ ಏನೆಂದರೆ ನಾವು ಇದನ್ನು ಆದಷ್ಟು ಬೇಗ ಪರಿಶೀಲನೆ ಮಾಡುತ್ತೇವೆ ಎಂದು. ಆದರೆ ಅದನ್ನು ಅನುಸರಿಸಿ ನಾವು ಕೆಲಸ ಮಾಡಬೇಕಾಗುತ್ತದೆ. ಎನ್ನುವ ಮಾತನ್ನು ನಾನುಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. To my surprise some of the Sub-Divisions and Divisions have been wound up. ಸಬ್ ಡಿವಿಜನ್‌ಗಳಿಲ್ಲಿ ಕೆಲಸವಿಲ್ಲವೆಂದು ಹೇಳಿ ಎಲಾ ಸಬ್ ಡಿವಿಜನ್‌ಗಳನ್ನು ವೈಂಡ್ ಆಫ್ ಮಾಡಿದ್ದಾರೆ. ಕಾವೇರಿ ಕಣಿವೆ ಯೋಜನೆಯಿಂದ ರೈತರು ಮರಣ ಹೋಮವಾಗುವಂತೆ ಮಾಡಿ ಈ ಸಬ್ ಡಿವಿಜನ್‌ಗಳನ್ನು ಮುಚ್ಚಿದ್ದಾರೆ. ಈ ವಿಚಾರವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ.....

ಶ್ರೀ ಎಸ್. ಆರ್. ಬೊಮ್ಮಾಯಿ.—ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಗಳ ಸಬ್ ಡಿವಿಜನ್‌ಗಳನ್ನೂ ಸಹಾ ಮುಚ್ಚಿದ್ದಾರೆ.

SRI H. D. DEVE GOWDA,—That is of alltogether a different issue, because that dispute has already been settled. But, here in this case I want to know what is the thinking of the Government. Whether the question of making use of water will be referred to a tribunal or not, I don't want to elaborate on that point. ಒಂದು ಕಾಲದಲ್ಲಿ ಶ್ರೀಮಾನ್ ಗುಂಡೂರಾಯರು ಕಾವೇರಿ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದ್ದು ನನಗೆ ಚೆನ್ನಾಗಿ ಗೊತ್ತಿದೆ. ಅವರು ಪ್ರಸ್ತಾಪ ಮಾಡಿದ ಉದ್ದೇಶ ಬೇರೆ ಇರಬಹುದು. ಅವರು ಪ್ರಸ್ತಾಪ ಮಾಡಿದ್ದು ಕೊಡಗು ಈ ಯೋಜನೆ ಇಲ್ಲದಿದ್ದರೆ ಮುಳಗಡೆ ಹೊಂದುತ್ತದೆ ಎಂದು ಇರಬಹುದು. ಏತಕ್ಕೆ ಸರ್ಕಾರದವರು ಈ ಸಬ್ ಡಿವಿಜನ್‌ಗಳನ್ನು ಮುಚ್ಚಬೇಕಾಗಿತ್ತು. ರಾಜ್ಯಸರ್ಕಾರದವರು ಕೇಂದ್ರ ಸರ್ಕಾರದವರೊಡಣೆ ದೂರವಾಣಿ ಮುಖಾಂತರ ವಿಚಾರ ಮಾಡಿ ಅಲ್ಲಿ ಏನು ನಡೆದಿದೆ ಎಂದು ತಿಳಿದುಕೊಳ್ಳಬೇಕಾಗಿತ್ತು. ವಿರೋಧಪಕ್ಷದವರನ್ನು ಕರೆಸಿ ಅವರ ಜೊತೆಯಲ್ಲಿ ಮಾತುಕತೆ ನಡೆಸಿ ಅವರ ಸಲಹೆಯನ್ನು ಪಡೆಯ ಬಹುದಾಗಿತ್ತು. ಆದರೆ ಇವೊತ್ತು ಈ ಅಧಿವೇಶನದ ಕೊನೆಯ ದಿವಸ ಆದ್ದರಿಂದ ನಾನು ಮಾನ್ಯ ಮಂತ್ರಿಗಳಿಗೆ ಮುನ್ನೆಚ್ಚರಿಕೆಯನ್ನು ಈ ವಿಷಯದಲ್ಲಿ ಕೊಡುತ್ತಿದ್ದೇನೆ. ಸರ್ಕಾರ ಈ ವಿಚಾರದಲ್ಲಿಲ್ಲ ತನ್ನ ಪಾತ್ರ ಏನು ಎಂಬುದನ್ನು ವಿವರವಾಗಿ ತಿಳಿಸ ಬೇಕಾಗುತ್ತದೆ. ಈ ಸರ್ಕಾರದವರನ್ನು ನಾನು ಕಡೆಯ ಸಾರಿ ವಾರನ್ ಮಾಡುತ್ತಿದ್ದೇನೆ. I want to warn this Government if they take this thing in a lighter vein, the future of the old Mysore people, will be ruined. ಯಾವುದೇ ದಾಕ್ಷಿಣ್ಯಕ್ಕೆ ಸರ್ಕಾರ ಒಳಗಾಗದೆ ಈ ಕೆಲಸವನ್ನು ಮಾಡಬೇಕಾಗುತ್ತದೆ. ಇದರಿಂದ ಏನು ದುಸ್‌ಪರಿಣಾಮವಾಗುತ್ತದೆ ನೋಡೋಣ ಎಂದು ಸಂಮ್ಮನೆ ಕುಳಿತುಕೊಳ್ಳಬಾರದು. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಇದರ ಬಗ್ಗೆ ಕೇಂದ್ರ ಸರ್ಕಾರದ ಭಾವನೆ ಏನು ಎಂಬುದನ್ನು ತಿಳಿದುಕೊಳ್ಳಬೇಕು. ಅವರ ಮನೋಭಾವ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ತಾವು ಆ ರೀತಿ ಮಾಡದೆ ಕೇಂದ್ರ ಸರ್ಕಾರದಲ್ಲಿ ನಮಗೇನು ಶ್ರೀಮಾನ್ ಜೈಯಾಲ್ ಸಿಂಗರಿಸಿದ್ದಾರೆ ಶ್ರೀಮಾನ್ ವೆಂಕಟರಾಮನ್ ಇದ್ದಾರೆ ನಮ್ಮನ್ನು ಯಾರು ಏನು ಮಾಡುತ್ತಾರೆ ಎಂದು ತಿಳಿದುಕೊಂಡರೆ ಅದು ಅಷ್ಟು ಸುಲಭವಾದ ವಿಷಯವಲ್ಲ. ಹಳೆಯ ಮೈಸೂರು ರಾಜ್ಯದಲ್ಲಿ ಈ ಮೂರು ಯೋಜನೆಗಳಿಂದ ಆಗಿರುವಂತಹ ಅನಾಹುತವನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಆದ್ದರಿಂದ ಈ ವಿಷಯದಲ್ಲಿ ಸರ್ಕಾರ ವಿಚಾರ ಮಾಡಬೇಕಾಗುತ್ತದೆ ಆದಷ್ಟು ಜಾಗ್ರತೆ ಈ ಕೆಲಸ ವಿಳಂಬವಾಗದೆ ಈ ಯೋಜನೆಗಳಿಗೆ ಆಧ್ಯತೆಯನ್ನು ಕೊಡಬೇಕಾಗುತ್ತದೆ. ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದವರಿಗೆ ಈ ಯೋಜನೆಗಳ ನೀರು ಹಂಚಿಕೆಗೆ ಸಂಬಂದಪಟ್ಟ ಹಾಗೆ ಸೆಂಟ್ರಲ್ ಆಕ್ಟ್ ಮಾಡಿಕೊಳ್ಳುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ ಎಂದು ಹೇಳಬೇಕು. ನಾನು ಈ ಮುಖ್ಯಮಂತ್ರಿ ಸ್ಥಾನದಿಂದ ಹೋದರೂ ಪರವಾಗಿಲ್ಲ, ಸೆಂಟ್ರಲ್ ಆಕ್ಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು

ಧೈರ್ಯವಾಗಿ ಕೇಂದ್ರ ಸರ್ಕಾರಕ್ಕೆ ಹೇಳಬೇಕು. ಪ್ರಧಾನ ಮಂತ್ರಿಯವರಿಗೆ ಹೇಳಬೇಕು. ನಾವು ನಮ್ಮ ಹಕ್ಕನ್ನು ಬಿಟ್ಟುಕೊಡುವುದಿಲ್ಲ ಎಂದು ಹೇಳಬೇಕ . ಎಂದು ನಾನು ಈ ಸಂದರ್ಭದಲ್ಲಿ ಎರಡನೆಯ ಸೂಚನೆಯನ್ನು ಕೊಡಬಯಸುತ್ತೇನೆ. ಮೂರನೆಯದಾಗಿ ಅವಕಾಶ ಬಿದ್ದರೆ ರಾಜ್ಯಸರ್ಕಾರದಿಂದ ಎಲ್ಲಾ ಪಕ್ಷದವರೂ ಕೇಂದ್ರಸರ್ಕಾರಕ್ಕೆ ಒಂದು ಡೆಲಿಗೇಷನ್ ಡೆಲ್ಲಿಯವರೆವಿಗೂ ತೆಗೆದುಕೊಂಡು ಹೋಗಿ ಅಲ್ಲಿ ಲಾಭಿಯನ್ನು ಮಾಡುವುದಕ್ಕೂ ನಾವು ತಯಾರಾಗಬೇಕು. ಈ ಬಗ್ಗೆ ಏನು ರಾಜಕಾರಣ ಮಾಡ ಬೇಕು ಎಂಬುದನ್ನು ನಮಗೆ ಚನ್ನಾಗಿ ಗೊತ್ತಿದೆ.

ಈ ಮುಂದೆ ಶ್ರೀಮಾನ್ ವಿಠೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ರಾಜ್ಯಸರ್ಕಾರದಿಂದ ಕೇಂದ್ರಸರ್ಕಾರಕ್ಕೆ ೧೦ ಡೆಲಿಗೇಷನ್‌ಗಳ ಒಂದು ನಿಯೋಜನೆಯನ್ನು ತಯಾರು ಮಾಡಿ ಅಲ್ಲಿರುವಂತಹ ೨೮ ಜನ ಪಾರ್ಲಿಮೆಂಟ್ ಸದಸ್ಯರೆಲ್ಲರನ್ನು ಸೇರಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಟೆಕ್ನಿಕಲ್ ಎಕ್ಸ್‌ಪೋರ್ಟ್ಸ್ ಅಭಿಪ್ರಾಯವನ್ನು ತೆಗೆದುಕೊಂಡು ಅವರ ಜೊತೆಯಲ್ಲಿ ಚರ್ಚೆ ಮಾಡಿ ಈ ಯೋಜನೆ ಗಳಲ್ಲಿ ನಡೆಯುತ್ತಿರುವ ಹಣಕಿಯನ್ನು ತಡೆಗಟ್ಟಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ಯೋಜನೆ ತೆಗೆದುಕೊಂಡು ಹೋದರೆ. Otherwise, you are going to ruin the future of the Old Mysore people and the people will curse you. By today afternoon before the closure of Session I want to know the reaction of Government on this issue.

SRI S. R. BOMMAI.—In a federal structure the State Governments have got powers. So far asriver water disputes are concerned, by such an enactment the powers will be taken away and t he State Government will be reduced to a department of Government of India. By this we will lose all our autonomy. That is very dangerous. Therefore, I would like to strongly urge the Government to take up this matter seriously and I hope at the end of the session some statement would be made by the Government. My friend suggested to talk over phone and inform the House, I feel, you or some of your colleagues or the Chief Minister could have gone to Delhi and discussed this matter with the Prime Minister and the concerned Ministers of Government of India and got the latest information, which could have been informed to the House. One month back we raised it. What were you doing ? Is the Government so careless and not interested in the development of the State ? Our party is not interested only in scandals. If there are scandals we will expose them. But at the same time we are also interested in the developmental activities of the State. We have raised a number of questions Particularly, here it is a question of life and death of the Cauvery basin people. I want to know why the Government has not come out with a statement ? At least, whether you will make a statement at the end of the Session ? ಈ ವಿಚಾರದ ಬಗ್ಗೆ ಸರ್ಕಾರವನ್ನು ನಾನು ಪಕ್ಷಕ್ಕೆ ಒತ್ತಾಯ ಮಾಡುತ್ತಿದ್ದೇನೆ ಎಂದರೆ ಈ ವಿಚಾರ ಒಂದು ಪಕ್ಷಕ್ಕೆ ಸೀಮಿತವಾದ ವಿಚಾರವಲ್ಲ. ಆಳುವ ಪಕ್ಷದವರೂ ಮತ್ತು ವಿರೋಧ ಪಕ್ಷದವರು ಎಲ್ಲಾ ಪಕ್ಷದವರೂ ಒಟ್ಟಿಗೆ ಸೇರಿ ಒಂದು ನಿಲುವನ್ನು ತೆಗೆದುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಈ ಮಾತನ್ನು ಪಕ್ಷಕ್ಕಾಗಿ ಹೇಳುತ್ತಿದ್ದೇನೆ ಎಂದರೆ ಸರ್ಕಾರದ ಕೈ ಬಲಪಡಿಸಬೇಕೆನ್ನುವ ಉದ್ದೇಶದಿಂದ. ಕೇಂದ್ರ ಸರ್ಕಾರದವರು ಈ ವಿಚಾರವನ್ನು ಆಲೋಚನೆ ಮಾಡದಿದ್ದರೆ ಕೇಂದ್ರಸರ್ಕಾರದ ವಿಧೇಯಕ ಪಾಸು ಆದರೆ ರಾಜ್ಯ ಸರ್ಕಾರದ ಹಕ್ಕಿಗೆ ಏನಾದರೂ ಭಾಧೆ ಬರುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ದೇವೇಗೌಡರು ಮತ್ತು ಶ್ರೀಮಾನ್ ಎಸ್. ಆರ್. ಬೊಮ್ಮಾಯಿಯವರು ಈ ವಿಚಾರವನ್ನು ಬಹಳ ಹಿಂದೆ ಈ ಸದನದಲ್ಲಿ ಎತ್ತಿದ್ದಾರೆ. ನಂತರ ಇದೇ ವಿಷಯವನ್ನು ಬ್ಯೂಜಿನೆಸ್ ಅಡ್ವೈಜರಿ ಕಮಿಟಿಯಲ್ಲಿಯೂ ಸಹಾ ಪ್ರಸ್ತಾಪ ಮಾಡಿದ್ದಾರೆ ಈ ದಿವಸವೂ ಕೂಡ ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ ಈಗಲಾದರೂ ಮಾನ್ಯ ಮುಖ್ಯಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಸಲಹೆಯನ್ನು ಕೊಟ್ಟಿದ್ದಾರೆ. ಸಬ್ ಡಿವಿಜನ್‌ಗಳನ್ನು ವೈಂಡ್ ಆಫ್ ಮಾಡಿದ್ದಾರೆ ಎಂದು ಪತ್ರಿಕೆಗಳಲ್ಲಿ ಬಂದಿರುವುದು ಕಾವೇರಿ ನದಿಗಳ ನೀರಿನ ಸಮಸ್ಯೆಗೆ ಸಂಬಂಧಪಟ್ಟದ್ದು ಅಲ್ಲ.

೧೦–೩೦ ಎ. ಎಂ.

ಆದ್ದರಿಂದ ನಿಮ್ಮೆಲ್ಲರ ಜೊತೆಯಲ್ಲಿ ಮಾತನಾಡಲು ಮಾನ್ಯ ಮುಖ್ಯಮಂತ್ರಿಗಳು ಇನ್ನು ಒಂದೆರಡು ದಿವಸಗಳಲ್ಲಿಯೇ ಒಂದು ಸಭೆ ಕರೆಯುವವರಿದ್ದಾರೆ. ಈ ವಿಚಾರದಲ್ಲಿ ನಮ್ಮ ರಾಜ್ಯದ ನಿಲುವನ್ನು ತಿಳಿಸಲು ಆಲ್–ಪಾರ್ಟಿ ಡೆಲಿಗೇಷನ್ ತೆಗೆದುಕೊಂಡು ಹೋಗತಕ್ಕಂಥ ವಿಚಾರವೂ ಸಹ ಆ ದಿನ ಪ್ರಸ್ತಾಪಕ್ಕೆ ಬಂದಾಗ, ಅದಕ್ಕೆ ಮುಖ್ಯಮಂತ್ರಿಗಳೇನೂ ನಕಾರ ಸೂಚಿಸಲಿಲ್ಲ. ಅಗತ್ಯಬಿದ್ದರೆ ಅದನ್ನು ಸಹ ಮಾಡೋಣ ಎಂದು ಹೇಳಿದರು. ಪಾರ್ಲಿಮೆಂಟ್ ಆಗಸ್ಟ್ ೧೮ ರಂದು ಸೇರುತ್ತಿದೆ. ಆದ್ದರಿಂದ ನಮ್ಮ ರಾಜ್ಯದ ೨೮ ಎಂ. ಪಿ.ಗಳ ಜೊತೆಯಲ್ಲಿಯೂ ಸಹ ಈ ಬಗ್ಗೆ ಮಾತನಾಡಿ. ಆ ಒಂದು ಹಂತದಲ್ಲಿಯೂ ಪ್ರಯತ್ನ ಮಾಡೋಣ. ಆ ದಿನ ತಾವುಗಳು ಮುಖ್ಯಮಂತ್ರಿಗಳ ಜೊತೆಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿದ ನಂತರ ನಾವು ಕೇಂದ್ರದ ಕೃಷಿ ಸಚಿವರ ಜೊತೆಯಲ್ಲಿ ಮಾತನಾಡಿದ್ದೇವೆ. ನಮ್ಮ ರಾಜ್ಯದ ನಿಲುವನ್ನು ಸ್ಪಷ್ಟವಾಗಿ ತಿಳಿದುಕೊಂಡ ನಂತರವೇ ತಾವು ಮುಂದುವರೆಯಬೇಕೆಂದು ಅವರಿಗೆ ತಿಳಿಸಿದ್ದೇವೆ. ಮುಖ್ಯಮಂತ್ರಿಗಳು ದೆಹಲಿಗೆ ಹೋಗುವುದಕ್ಕೆ ಮುಂಚೆ ಎಲ್ಲ ವಿರೋಧಪಕ್ಷದ ಮುಖಂಡರುಗಳ ಸಲಹೆಗಳನ್ನು ಪಡೆದುಕೊಂಡೇ ಹೋಗುವವರಿದ್ದಾರೆ. ಈಗಾಗಲೇ ಕಾವೇರಿ ಜಲ ವಿವಾದದ ಬಗ್ಗೆ ಮಾತುಕತೆಯಾಡಲು ಕೇಂದ್ರದವರು ಮುಂದಿನ ತಿಂಗಳ ೧೮ನೇ ತಾರೀಖಿನ್ನು ನಿಗದಿ ಮಾಡಿದ್ದಾರೆ. ಅದಕ್ಕೂ ಮೊದಲು ಮುಖ್ಯಮಂತ್ರಿಗಳು ದೆಹಲಿಗೆ ಹೋಗುವವರಿದ್ದಾರೆ. ಆ ರೀತಿ ಹೋಗುವುದಕ್ಕೆ ಮೊದಲು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ಒಂದು ಸ್ಪಷ್ಟಜಿಯನ್ನು ತಯಾರು ಮಾಡಿಕೊಂಡು ಹೋಗುವುದು ಒಳ್ಳೆಯದೆಂದು ಮಾನ್ಯ ದೇವೇಗೌಡರು ಮತ್ತು ಮಾನ್ಯ ಬೊಮ್ಮಾಯಿ ಅವರು ಸಲಹೆ ಕೊಟ್ಟಿದ್ದಾರೆ ಅದನ್ನು ಮತ್ತು ಈ ವಿಚಾರದಲ್ಲಿ ತಮ್ಮ ಒಂದು ಕಳವಳ ಮತ್ತು ಆತಂಕವನ್ನು ಏನು ವ್ಯಕ್ತಪಡಿಸಿದ್ದಾರೆ, ಇದೆಲ್ಲವನ್ನೂ ಸರ್ಕಾರ ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿಗಳು ಇಷ್ಟರಲ್ಲಿಯೇ ವಿರೋಧಪಕ್ಷದ ನಾಯಕರುಗಳ ಜೊತೆಯಲ್ಲಿ ಮಾತನಾಡುವವರಿದ್ದಾರೆ. ೧೮ನೇ ತಾರೀಖು ದೆಹಲಿಗೆ ಹೋಗುವುದಕ್ಕೆ ಮೊದಲೇ ಈ ಬಗ್ಗೆ ವಿಶೇಷ ಕಾರ್ಯಕ್ರಮ ಕೈಕೊಳ್ಳಬೇಕೆಂದು ಏನು ಹೇಳಿದ್ದಾರೆ, ಆ ಬಗ್ಗೆ ಸರ್ಕಾರ ವಿಚಾರ ಮಾಡುತ್ತದೆಂಬ ಭರವಸೆಯನ್ನು ಕೊಟ್ಟು. ಈ ಬಗ್ಗೆ ಯಾವ ರೀತಿಯಾದಂಥ ಉದಾಸೀನ ಭಾವನೆ ಸರ್ಕಾರದ ಮಟ್ಟದಲ್ಲಿ ಇಲ್ಲ ಹಾಗೂ ಸರ್ಕಾರ ಬಹಳ ಎಚ್ಚರಿಕೆಯಿಂದ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದ್ರರೆ, ಇದು ಜೀವನ್ಮರಣ ಸಮಸ್ಯೆಯಾಗಿದೆ. ಆದ್ದರಿಂದ ಸರ್ಕಾರ ಎಲ್ಲ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತದೆಂದು ಹೇಳಬಯಸುತ್ತೇನೆ.

*re : Abusing a lady lecturer belonging to Schedule Caste working in Central Institute of Home Science College.*

ಶ್ರೀ ಟಿ. ಚೌಡಯ್ಯ (ಭರವಸಾಗರ).—ಮಾನ್ಯ ಅಧ್ಯಕ್ಷರೇ, ಸೆಂಟ್ರಲ್ ಇನ್ಸ್‌ಟಿಟ್ಯೂಟ್ ಆಫ್ ಹೋಂ ಸೆನ್ಸ್ ಕಾಲೇಜಿನಲ್ಲಿ ನಡೆದಿರುವಂತಹ ಅಹಿತಕರ ಘಟನೆಯನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಅಲ್ಲಿ ಈಗ ಕಳೆದ ೧೩ ವರ್ಷಗಳಿಂದ ಕೆಲಸ ಮಾಡುತ್ತಿರುವ ಹರಿಜನ ಕೋಮಿಗೆ ಸೇರಿದ ಶ್ರೀಮತಿ ಶ್ರೀ ಹರಿದಾಸ್ ಎಂಬ ಮಹಿಳಾ ಲೆಕ್ಚರರ್ ಒಬ್ಬರನ್ನು ಆದೇ ಕಾಲೇಜಿನ ಪ್ರಿನ್ಸಿಪಾಲ್ ಆದಂಥ ಶ್ರೀಮತಿ ಎಚ್. ಎಸ್. ಶಾರದಮ್ಮ ಅವರು ತಮ್ಮ ಛೇಂಬರ್‌ಗೆ ಹನ್ನೊಂದೂ ಮುಕ್ಕಾಲು ಗಂಟೆಯ ಸಮಯದಲ್ಲಿ ಕರೆಸಿಕೊಂಡು ಒಂದು ಸಣ್ಣ ಕಾರಣಕ್ಕಾಗಿ ಅವರ ಇತರ ಸಹೋದ್ಯೋಗಿಗಳ ಸಮಕ್ಷಮದಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಅವರೇನಾದರೂ ತಪ್ಪು